

بِسۡمِ اللّٰہِ الرَّحۡمٰنِ الرَّحِیۡمِ

# ಯು.ಕೆ. ಜಲ್ಸಾಸಾಲಾನದ ಅನುಗ್ರಹಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **04-08-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರ ಬ್ರಿಟನಿನ ಜಲ್ಸಾಸಾಲಾನವನ್ನು ಸುಸೂತ್ರವಾಗಿ ಜರಗಿಸಲು ಸಾಧ್ಯವಾದುದು ಅಲ್ಲಾಹನ ಮಹತ್ತರವಾದ ಅನುಗ್ರಹ ಮತ್ತು ಔದಾರ್ಯವಾಗಿದೆ. ಜಲ್ಸ ಸಾಲಾನದ ಮೂರು ದಿನಗಳಲ್ಲಿಯೂ ನಾವು ಅಲ್ಲಾಹನ ಅನುಗ್ರಹಗಳ ಮತ್ತು ವರದಾನಗಳ ದೃಶ್ಯಗಳನ್ನು ಕಂಡೆವು. ಪ್ರತಿಕ್ಷಣದಲ್ಲಿಯೂ ಅಲ್ಲಾಹನ ಸಹಾಯ ಮತ್ತು ಅನುಗ್ರಹ ಅವತೀರ್ಣವಾಗುತ್ತಿವೆ ಎಂದು ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬನು ಮನವರಿಕೆ ಮಾಡಿಕೊಳ್ಳುತ್ತಿದ್ದನು. ಆದುದರಿಂದ ಇದರ ಬಗ್ಗೆ ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಅದು ಕಡಿಮೆಯೇ ಆಗಿರುವುದು. ಈ ಜಲ್ಸದ ಕಾರ್ಯಕರ್ತರೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅದೇ ರೀತಿ ಈ ಜಲ್ಸದಲ್ಲಿ ಭಾಗವಹಿಸಿದವರೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಆ ಮೂಲಕ ಅವರು ಅಲ್ಲಾಹನ ಅನುಗ್ರಹಗಳನ್ನು ಹೆಚ್ಚು ಹೆಚ್ಚಾಗಿ ಗಳಿಸುವವರಾಗುವರು. ಅದಲ್ಲದೆ ಜಲ್ಸದಲ್ಲಿ ಭಾಗವಹಿಸಿದವರು ಜಲ್ಸದ ಕಾರ್ಯಕರ್ತರಿಗೂ ಸ್ವಯಂ ಸೇವಕರಿಗೂ ಕೃತಜ್ಞತೆ ಅರ್ಪಿಸಬೇಕು.

ಜಲ್ಸಾಸಾಲಾನ ಜರಗಿಸುವುದರ ಉದ್ದೇಶಲಕ್ಷ್ಯಗಳಲ್ಲಿ ಒಂದು ಪರಸ್ಪರ ಭ್ರಾತೃಭಾವನೆ ಮತ್ತು ಪರಸ್ಪರ ಕೃತಜ್ಞತೆ ಅರ್ಪಿಸುವ ಭಾವನೆ ಉದ್ಭವಿಸಿ ಅದು ಮಾದರಿಯಾಗಿರಬೇಕು ಎಂದಾಗಿದೆ. ಅಲ್ಲಾಹನ ಅನುಗ್ರಹದಿಂದ ನಾವು ಪ್ರಕಟಿಸುವ ಪ್ರೀತಿ ಮತ್ತು ಭ್ರಾತೃತ್ವದ ಭಾವನೆಗಳನ್ನು ನಾವು ನಮ್ಮವರೊಂದಿಗೆ ಮತ್ತು ಅನ್ಯರೊಂದಿಗೆ ಪ್ರಕಟಿಸುವಾಗ ಅದು ಈ ಜಲ್ಸಕ್ಕೆ ಆಗಮಿಸುವ ಪ್ರತಿಯೊಬ್ಬ ಅತಿಥಿಯ ಮೇಲೆ ಪ್ರಭಾವ ಬೀರುತ್ತದೆ. ಜ್ಞಾನವರ್ಧಕ ಧಾರ್ಮಿಕ ಕಾರ್ಯಗಳು ಮಾತ್ರವಲ್ಲ ಪ್ರತಿಯೊಬ್ಬ ಅಹ್ಮದಿಯ ವರ್ತನೆಯ ರೀತಿ ಜಲ್ಸಕ್ಕೆ ಆಗಮಿಸುವ ಅಹ್ಮದಿಯೇತರರ ಮೇಲೆ ಅಪರಿಮಿತ ಪ್ರಭಾವ ಬೀರುತ್ತದೆ. ಅದರ ಬಗ್ಗೆ ಅವರು ಅಭಿಪ್ರಾಯ ಸೂಚಿಸುತ್ತಾರೆ. ಇಸ್ಲಾಮ್ ಧರ್ಮದ ಉಪದೇಶಗಳ ವಾಸ್ತವಿಕ ರೂಪವನ್ನು ನಾವು ಜಲ್ಸ ಸಾಲಾನದಲ್ಲಿ ಕಂಡೆವು ಮತ್ತು ಅದರಿಂದ ಬಹಳ ಪ್ರಭಾವಿತರಾದೆವು ಎಂದು ಅವರು ಹೇಳುತ್ತಾರೆ. ಜಲ್ಸಕ್ಕೆ ಆಗಮಿಸಿದ ಅತಿಥಿಗಳು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಈಗ ನಾನು ನಿಮ್ಮ ಮುಂದೆ ಇರಿಸುವೆನು. ಅವರು ಜಲ್ಸದ ಪರಿಸರವನ್ನು ವೀಕ್ಷಿಸಿ ಬಹಿರಂಗವಾಗಿ ಹೀಗೆ ಹೇಳಿದರು: ಇದು ಇಸ್ಲಾಮ್ ಧರ್ಮದ ಉಪದೇಶವಾಗಿದ್ದರೆ ಈ ಉಪದೇಶ ಲೋಕದಾದ್ಯಂತ ಹರಡುವುದು ಆವಶ್ಯಕವಾಗಿದೆ.

ಬೆನಿನ್ ದೇಶದ ಮಾಜಿ ವಿದೇಶ ಸಚಿವೆ ಹಾಗೂ ಅಧ್ಯಕ್ಷರ ಸಲಹೆಗಾರ್ತಿಯಾಗಿರುವ ಮರ್‌ಯಮ್ ಬೋನಿ ಜಿಯಾಲೋ ಸಾಹಿಬ ಹೀಗೆ ಹೇಳಿದರು: ಈ ಜಲ್ಸದ ಮೂಲಕ ಅಹ್ಮದಿಯಾ ಜಮಾಅತ್ ಬಗ್ಗೆ ಗಾಢವಾಗಿ ಮನವರಿಕೆ ಮಾಡಲು ನನಗೆ ಸಂದರ್ಭ ಲಭಿಸಿತು. ಜಲ್ಸದ ಸುವ್ಯವಸ್ಥೆಯ ಕಾರಣದಿಂದ ನಾನು ಬಹಳ ಪ್ರಭಾವಿತೆಯಾಗಿದ್ದೇನೆ. ಕಾರ್ಯಕರ್ತರು ಉನ್ನತ ಮಟ್ಟದ ವ್ಯವಸ್ಥೆಯ ಕೌಶಲ್ಯವನ್ನು ಪ್ರದರ್ಶಿಸಿದ್ದಾರೆ. ಕಾರ್ಯಕರ್ತರ ಕಾರ್ಯನಿಷ್ಠೆಯನ್ನು ಕಂಡು ನಾನು ಆಶ್ಚರ್ಯ ಚಕಿತೆಯಾದೆನು. ನಾನು ಜಲ್ಸದ ವ್ಯವಸ್ಥೆ ಬಗ್ಗೆ ಪ್ರತಿಯೊಂದು ರೀತಿಯಲ್ಲಿ ಪರಿಶೋಧಿಸಿದೆ. ಆದರೆ ಇಷ್ಟು ದೊಡ್ಡ ಮಹಾಸಮ್ಮೇಳನದಲ್ಲಿ ಯಾವುದೇ ಕುಂದುಕೊರತೆ ಕಾಣಲು ಸಾಧ್ಯವಾಗಲಿಲ್ಲ. ನಾನು ಕಾರ್ಯಕರ್ತರ ಕಡೆಗೆ ನೋಡಿದಾಗ ಅವರಲ್ಲಿ ಚಿಕ್ಕವರು, ದೊಡ್ಡವರು, ವೃದ್ಧರು, ಯುವಕರು, ಪುರುಷರು, ಮಹಿಳೆಯರು, ಪ್ರತಿಯೊಂದು ವಿಭಾಗದವರು ಅನ್ಯರಿಗೆ ಸುಖಸೌಲಭ್ಯ ಒದಗಿಸಲು ಪ್ರಯತ್ನಿಸುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿ ತನ್ನ ಸುಖ ಸೌಲಭ್ಯವನ್ನು ಮರೆತು ಅನ್ಯರಿಗೆ ಸುಖ ಸಂತೋಷ ಒದಗಿಸಲು ಸಿದ್ಧರಾಗಿದ್ದರು. ಅಹ್ಮದಿಯ್ಯತ್ ಪ್ರತಿಪಾದಿಸುವಂತಹ ಇಸ್ಲಾಮ್ ಧರ್ಮವೇ ಲೋಕಕ್ಕೆ ಶಾಂತಿಯನ್ನು ನೀಡಲು ಸಾಧ್ಯವಿದೆ. ಲೋಕದ ಸಮಸ್ಯೆಗಳಿಗೆ ಪರಿಹಾರ ಅದರಲ್ಲಿಯೇ ಇದೆ. ಅಹ್ಮದಿಯಾ ಜಮಾಅತಿನ ಇಮಾಮರು ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣ ನನ್ನ ಯೋಚನೆಗಳ ಮೇಲೆ ಗಾಢವಾದ ಅಚ್ಚೊತ್ತಿದೆ. ಇತರ ಮುಸ್ಲಿಮ್ ಗುಂಪುಗಳ ದೃಷ್ಟಿಯಲ್ಲಿ ಒಬ್ಬ ಮಹಿಳೆಯ ಸ್ಥಾನ ಒಬ್ಬ ದಾಸಿಗಿಂತ ಹೆಚ್ಚಿಗೆ ಇಲ್ಲ. ಆದರೆ ಅಹ್ಮದಿಯಾ ಜಮಾಅತಿನ ಇಮಾಮರು ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣದಲ್ಲಿ ಮಹಿಳೆಯನ್ನು ಒಬ್ಬ ಅಧ್ಯಾಪಿಕೆ ಎಂದು ಹೇಳಿದ್ದಾರೆ. ಮುಂದಿನ ಪೀಳಿಗೆಗೆ ತರಬೇತಿ ನೀಡುವುದು, ವಿದ್ಯಾಭ್ಯಾಸ ನೀಡುವುದು ಮಹಿಳೆಯ ಹೊಣೆಗಾರಿಕೆಯಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗ್ವಾಟೇಮಾಲ ದೇಶದ ನೇಶನಲ್ ಪಾರ್ಲಿಮೆಂಟ್ ಸದಸ್ಯೆ ಎಲೆನ್ ಕೇಲ್ಸ್ ತನ್ನ ಅಭಿಪ್ರಾಯವನ್ನು ಹೀಗೆ ಪ್ರಕಟಿಸಿದರು: ಜಲ್ಸದಲ್ಲಿ ಭಾಗವಹಿಸಿದುದು ಬಹಳ ವಿಸ್ಮಯಕರ ಮತ್ತು ಆಶ್ಚರ್ಯ ಚಕಿತಗೊಳಿಸುವ ಅನುಭವವಾಗಿತ್ತು. ಇಸ್ಲಾಮ್ ಧರ್ಮ ಮತ್ತು ಅಹ್ಮದಿಯಾ ಜಮಾಅತ್ ಬಗ್ಗೆ ನನ್ನ ಅಭಿಪ್ರಾಯಗಳಲ್ಲಿ ತೀವ್ರ ಬದಲಾವಣೆ ಉಂಟಾಗಿದೆ. ಮಾಧ್ಯಮಗಳು ಇಸ್ಲಾಮ್ ಬಗ್ಗೆ ಬಹಳ ತಪ್ಪಾದ ಮತ್ತು ಭಯಾನಕ ರೂಪವನ್ನು ಸೃಷ್ಟಿಸಿದೆ. ಇಸ್ಲಾಮ್ ಭಯೋತ್ಪಾದಕ ಕೃತ್ಯಗಳ ಬಗ್ಗೆ ಮತ್ತು ದ್ವೇಷದ ಬಗ್ಗೆ ಉಪದೇಶ ನೀಡುತ್ತವೆ ಎಂದು ಮಾಧ್ಯಮಗಳು ಪ್ರಚಾರ ಮಾಡುತ್ತವೆ. ಆದರೆ ನಮಗೆ ಈ ಜಲ್ಸದಲ್ಲಿ ಇಸ್ಲಾಮಿನ ನೈಜ ತತ್ವಗಳ ಅನುಷ್ಠಾನದ ರೂಪವನ್ನು ಕಾಣುವ ಸಂದರ್ಭ ಲಭಿಸಿತು. ಸಾವಿರಾರು ಅತಿಥಿಗಳಿಗೆ ಕಾರ್ಯಕರ್ತರು ಮಾಡುತ್ತಿರುವ ಸೇವೆಯ ದೃಶ್ಯಗಳು ಅದ್ಭುತಕರವಾಗಿದ್ದುವು. ನಾನು ಇಸ್ಲಾಮ್ ಧರ್ಮದ ಶಾಂತಿಭರಿತ ಸುಂದರ ತತ್ವಗಳ ಚಿತ್ರವನ್ನು ತೆಗೆದುಕೊಂಡು ಹಿಂದಿರುಗುತ್ತಿದ್ದೇನೆ.

ಕೋಸ್ಟಾರಿಕ ದೇಶದ ನೇಶನಲ್ ಯುನಿವರ್ಸಿಟಿಯ ಪ್ರೊಫೆಸರ್ ಸರ್ ಯಜಿಯೋ ಮಾಯಾ ಈ ಜಲ್ಸದಲ್ಲಿ

ಭಾಗವಹಿಸಿದ್ದರು. ಅವರು ಹೇಳುತ್ತಾರೆ: ನಾನು ಈ ಜಲ್ಸದಲ್ಲಿ ಇಸ್ಲಾಮ್ ಧರ್ಮದ ಹೊಸ ಚಿತ್ರವನ್ನು ಕಂಡೆನು. ಮುಸ್ಲಿಮರ ಎಂತಹ ಒಂದು ಸಮೂಹವನ್ನು ನಾನು ಕಂಡೆನೆಂದರೆ ಅವರು ಪರಸ್ಪರ ಪ್ರೀತಿ ವಾತ್ಸಲ್ಯಗಳ ಪ್ರಕಟಣೆಯಲ್ಲಿ ಅಪ್ರತಿಮರಾಗಿದ್ದಾರೆ. ಅವರು ತಮ್ಮ ವಿಶ್ವಾಸವನ್ನು ಕೃತ್ಯಗಳ ರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ನಾನು ಮರಳಿಹೋಗಿ ನನ್ನ ಸ್ನೇಹಿತರಿಗೆ ಮತ್ತು ವಿದ್ಯಾರ್ಥಿಗಳಿಗೆ ತಿಳಿಸುವೆನು, ಇಸ್ಲಾಮ್ ಧರ್ಮದ ವಾಸ್ತವಿಕ ಮತ್ತು ಸುಂದರ ತತ್ವಗಳನ್ನು ಅಹ್ಮದಿಯಾ ಜಮಾಅತ್ ತಮ್ಮ ಕೃತ್ಯಗಳ ಮೂಲಕ ತೋರಿಸುತ್ತಿದೆ ಹಾಗೂ ಈ ಜಮಾಅತ್ ತನ್ನ ಧ್ಯೇಯ ವಚನದಂತೆ ವರ್ತಿಸುತ್ತಿದೆ ಎಂದು.

ಈ ರೀತಿ ಜಲ್ಸಕ್ಕೆ ಆಗಮಿಸುವ ಈ ಅತಿಥಿಗಳು ನಮ್ಮ ತಬ್ಲೀಗ್ ವರ್ಧಿಸುವ ಮಾರ್ಗ ಸಹ ಆಗುತ್ತಾರೆ. ಕೋಸ್ಟಾರಿಕ ದೇಶದ ಪಾರ್ಲಿಮೆಂಟ್ ಸದಸ್ಯರ ಸಲಹೆಗಾರ ಡಗ್ಲಸ್ ಮೋಂಟೆರೋಸೋ ಹೀಗೆ ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣಗಳನ್ನು ನಾನು ಬಹಳ ಲಕ್ಷ್ಯವಿಟ್ಟು ಆಲಿಸಿದೆ. ಶತ್ರುಗಳನ್ನು ಕ್ಷಮಿಸಬೇಕು ಮತ್ತು ಅವರಿಗೋಸ್ಕರ ಪ್ರಾರ್ಥಿಸಬೇಕು, ಆ ಮೂಲಕ ಹೃದಯ ದ್ವೇಷದಿಂದ ಮುಕ್ತವಾಗುತ್ತದೆ ಎಂಬ ಅವರ ಉಪದೇಶ ನನಗೆ ಬಹಳ ಹಿಡಿಸಿತು. (ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ನೀಡಿದ ಉಪದೇಶವಾಗಿದೆ). ಅವರು ಮುಂದುವರಿಸಿ ಹೇಳಿದರು: ಈ ಉಪದೇಶ ಲೋಕದಲ್ಲಿ ಶಾಂತಿ ಸ್ಥಾಪಿಸಲು ಮಾರ್ಗವಾಗಬಲ್ಲುದು. ಇಮಾಮರ ಭಾಷಣ ನನಗೆ ಆಧ್ಯಾತ್ಮಿಕವಾಗಿಯೂ ಕರ್ಮ ಸಂಬಂಧವಾಗಿಯೂ ಬಹಳ ಲಾಭಕರವಾದುವು. ಇಸ್ಲಾಮ್ ತತ್ವಗಳ ನೈಜ ಅನುಷ್ಠಾನ ರೂಪವನ್ನು ಈ ಜಲ್ಸದಲ್ಲಿ ಕಾಣಲು ಸಾಧ್ಯವಾಯಿತು.

ಒಬ್ಬ ಕ್ರೋಯೇಶಿಯನ್ ಮಹಿಳೆ ಕೆಥರಿನ ಸಾಲಿಕ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳಿದರು: ನಾನು ಚರ್ಚ್‌ನಲ್ಲಿ ನನ್ ಆಗಿದ್ದೆ. ಈಗ ಸತ್ಯಾನ್ವೇಷಿಯಾಗಿದ್ದೇನೆ. ಜಲ್ಸದ ಪರಿಸರ, ಇಲ್ಲಿ ಏರ್ಪಡಿಸಲಾದ ಎಕ್ಸಿಬಿಷನ್‌ಗಳು, ಜಮಾಅತ್ ಬಗ್ಗೆ ಇತರ ಮಾಹಿತಿಗಳು, ನನ್ನ ವಿವೇಕಕ್ಕೆ ಬಹಳ ಪ್ರಕಾಶ ನೀಡಿದೆ. ನನ್ನ ಸತ್ಯಾನ್ವೇಷಣೆಯ ಪ್ರಯಾಣ ಬೇಗನೆ ತನ್ನ ಗುರಿಗೆ ತಲಪುವುದೆಂದು ತೋರುತ್ತದೆ. ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣಗಳು ನನ್ನ ಮೇಲೆ ಬಹಳ ಗಾಢವಾದ ಪ್ರಭಾವ ಬೀರಿವೆ.

ಕ್ರೋಯೇಶಿಯಾದಿಂದ ಕಳೆದ ವರ್ಷ ಒಂದು ವೃದ್ಧ ದಂಪತಿ ಆಗಮಿಸಿತ್ತು. ಈ ವರ್ಷ ಸಹ ಅವರು ಬಂದಿದ್ದಾರೆ. ಅವರು ನನ್ನನ್ನು ಭೇಟಿಯಾದಾಗ ಹೇಳಿದರು: ಕಳೆದ ವರ್ಷ ನಾವು ಸಾಮಾನ್ಯ ಮುಸ್ಲಿಮರ ಹಾಗೆ ಜಲ್ಸದಲ್ಲಿ ಭಾಗವಹಿಸಿದ್ದೆವು. ಈ ವರ್ಷ ನಾವು ಅಹ್ಮದಿ ಮುಸ್ಲಿಮರಾಗಿ ಜಲ್ಸಕ್ಕೆ ಭಾಗವಹಿಸಲು ಆಗಮಿಸಿದ್ದೇವೆ ಎಂದು. (ಹುಝೂರ್ ಇತರ ಅನೇಕ ಅತಿಥಿಗಳ ಅಭಿಪ್ರಾಯಗಳನ್ನು ವಿವರಿಸಿದ ನಂತರ ಹೇಳಿದರು:) ಈ ರೀತಿಯಾಗಿ ನಮ್ಮ ಜಮಾಅತಿನ ಪ್ರಭಾವ ಜಲ್ಸದ ಕಾಲದಲ್ಲಿ ಅನ್ಯರ ಮೇಲೆ ಉಂಟಾಗುತ್ತಿದೆ. ಬೇರೆ ಸಂದರ್ಭಗಳಲ್ಲೂ ಇಂತಹ ಪ್ರಭಾವ ಅನ್ಯರ ಮೇಲುಂಟಾಗಲು ನಾವು ಪ್ರಯತ್ನಿಸಬೇಕು. ಇದು ಪ್ರತಿಯೊಬ್ಬ ಅಹ್ಮದಿಯ ಮೇಲೆ ಇರುವ ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ಕೇವಲ ಕೆಲವು ದಿನಗಳ ತೋರಿಕೆಯ ವರ್ತನೆ ಇರಬಾರದು. ಯಾವಾಗಲೂ ಅನ್ಯರ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ನಮ್ಮ ವರ್ತನೆ ಇರಬೇಕು.

ಕೆಲವು ಅಹ್ಮದಿಯೇತರ ಮುಸ್ಲಿಮರೂ ಜಲ್ಸದಲ್ಲಿ ಭಾಗವಹಿಸಿದ್ದರು. ಕೆಲವರು ತಮ್ಮ ದೇಶಗಳ ಸರಕಾರಗಳ ನಾಯಕರೂ ಸರಕಾರದ ಪ್ರತಿನಿಧಿಗಳೂ ಆಗಿದ್ದಾರೆ. ಗಿನಿಕನಾಕಿರಿ ದೇಶದ ನೇಶನಲ್ ಅಸೆಂಬ್ಲಿಯ ವೈಸ್ ಪ್ರೆಸಿಡೆಂಟ್ ಅಲ್‌ಹಾಜ್ ಮುಹಮ್ಮದೂ ಸಲೀಮ್ ಸಾಹಿಬ್ ಹೇಳುತ್ತಾರೆ: ನನಗೆ ಹಜ್ ಮಾಡುವ ಸೌಭಾಗ್ಯ ಲಭಿಸಿದೆ. ಅನೇಕ ಇಸ್ಲಾಮೀ ದೇಶಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆದರೆ ಇಷ್ಟು ಉತ್ತಮವೂ ಪ್ರಶಂಸನೀಯವೂ ಆದ ವ್ಯವಸ್ಥೆಯನ್ನು ನಾನು ಎಲ್ಲಿಯೂ ಕಂಡಿಲ್ಲ. ಇದು ಇಸ್ಲಾಮಿನ ವಾಸ್ತವಿಕ ಆತ್ಮವಾಗಿದೆ. ಇಲ್ಲಿ ಅದನ್ನು ನೋಡಲು ನಮಗೆ ಸಾಧ್ಯವಾಯಿತು. ನೀವು ನಿಮ್ಮ ಕೆಲಸಗಳಲ್ಲಿ ಎಲ್ಲರಿಗಿಂತಲೂ ಮುಂದೆ ಇದ್ದೀರಿ. ನೀವೇ ಸರಿಯಾದ ಮಾರ್ಗದಲ್ಲಿರುವಿರಿ. ನಿಮ್ಮ ಹಿಂದೆ ಅಲ್ಲಾಹನ ನೆರವಿನ ಹಸ್ತವಿದೆ ಎಂದು ನನಗೆ ದೃಢವಾಗಿದೆ.

ಸಿಯೆರ್ರಾಲಿಯೋನ್ ದೇಶದ ಪಾರ್ಲಿಮೆಂಟ್ ಸದಸ್ಯ ಅಲೀ ಕಲಾಕೋ ಸಾಹಿಬ್ ಹೇಳುತ್ತಾರೆ: ಅಹ್ಮದಿಯ್ಯತ್ ಇಸ್ಲಾಮಿನ ವಾಸ್ತವಿಕ ಚಿತ್ರವೇ ಆಗಿದೆ. ಅಹ್ಮದಿ ಮುಸ್ಲಿಮರು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮಾಡುತ್ತಿರುವ ಪ್ರಯತ್ನಗಳು ಮಹತ್ವಪೂರ್ಣವಾಗಿವೆ. ಈಗ ಎಲ್ಲ ದಿಕ್ಕುಗಳಲ್ಲೂ ಇಸ್ಲಾಮ್ ಧರ್ಮದ ಹೆಸರನ್ನು ಭಯೋತ್ಪಾದಕ ಕೃತ್ಯಗಳೊಂದಿಗೆ ಅನ್ವಯಿಸಿ ಹೇಳಲಾಗುತ್ತಿದೆ. ಆದರೆ ಅಹ್ಮದಿಯರು ಈ ಅಭಿಪ್ರಾಯವನ್ನು ತಪ್ಪೆಂದು ಸಾಬೀತುಗೊಳಿಸುತ್ತಿದ್ದಾರೆ. ಜಲ್ಸದ ವ್ಯವಸ್ಥೆ ಬಹಳ ಉತ್ತಮವಾಗಿತ್ತು. ಚಿಕ್ಕ ಮಕ್ಕಳು ಸಹ ಜನರ ಸೇವೆಗೆ ನೇಮಿಸಲ್ಪಟ್ಟಿದ್ದರು. ಈ ದೃಶ್ಯ ಮನಮೋಹಕವಾಗಿತ್ತು. ಅಹ್ಮದಿಯಾ ಜಮಾಅತಿನ ಸತ್ಯತೆಯನ್ನು ಸಾಬೀತುಗೊಳಿಸಲು ಈ ದೃಶ್ಯವೇ ಸಾಕು.

ತುರ್ಕ್‌ಮೆನಿಸ್ಥಾನದಿಂದ ಒಬ್ಬ ಸ್ನೇಹಿತರು ಅಬ್ದುರ್ರಶೀದ್ ಸಾಹಿಬ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳುತ್ತಾರೆ: ನಾನು ಲಂಡನ್‌ಗೆ ಆಗಮಿಸಿದ ದಿನದಿಂದ ಪ್ರೀತಿಯಿಂದ ಆವರಿಸಲ್ಪಟ್ಟಿರುವೆನು. ನಾನು ನನ್ನ ತಂದೆ ತಾಯಂದಿರೊಂದಿಗೆ ಮತ್ತು ನನ್ನ ಕುಟುಂಬದವರೊಂದಿಗೆ ಇರುವಂತೆ ಭಾಸವಾಗುತ್ತಿದೆ. ಈ ಜಲ್ಸದಲ್ಲಿ ಭಾವಹಿಸಿ ನನಗೆ ಹೀಗೆ ಮನವರಿಕೆಯಾಯಿತು. ನಾನು ನನ್ನ ಜೀವಿತವನ್ನು ಅಲ್ಲಾಹನನ್ನು ಹುಡುಕುತ್ತಾ ಕಳೆದೆ. ಆದರೆ ಇಲ್ಲಿಗೆ ಆಗಮಿಸಿದ ನಂತರ ಮಾತ್ರ ನನಗೆ ಅಲ್ಲಾಹನು ದೊರೆತನು. ಅಲ್ಲಾಹನ ಅನುಗ್ರಹದಿಂದ ಆಲಮೀ ಬೈಅತ್ ಎಂಬ ವೈಭವಶಾಲಿ ಸಮಾರಂಭದಲ್ಲಿ ಸೇರಿಕೊಂಡು ಬೈಅತ್ ಮಾಡುವ ಭಾಗ್ಯ ನನಗೆ ಲಭಿಸಿತು.

ನಮ್ಮ ಈ ಸ್ನೇಹಭರಿತ ಹಾಗೂ ಸಾಹೋದರ್ಯದ ದೃಶ್ಯಗಳನ್ನು ಕಂಡು ಕೆಲವು ನವ ಅಹ್ಮದಿಯರು ಸಹ ಅತ್ಯಂತ ಪ್ರಭಾವಿತರಾಗಿ ತಮ್ಮ ವಿಶ್ವಾಸವನ್ನು ವರ್ಧಿಸಿಕೊಳ್ಳುತ್ತಾರೆ. ಜಮೇಕಾದಿಂದ ಆಗಮಿಸಿದ ಓರ್ವ ನವ ಅಹ್ಮದಿ ಮಹಿಳೆ ವಿನ್‌ಸನ್ ವಲೀಂ ಹೇಳಿದರು: ಜಲ್ಸದಲ್ಲಿ ಖಲೀಫತುಲ್ ಮಸೀಹರ ಭಾಷಣಗಳು ಮತ್ತು ವಿಶಿಷ್ಟವಾಗಿ ಆಲಮೀ ಬೈಅತ್ ಒಂದು ಅಭೂತಪೂರ್ವ ಅನುಭವವಾಗಿತ್ತು. ಕಾರ್ಯಕರ್ತರ ನಿಸ್ವಾರ್ಥ ಸೇವೆಗಳನ್ನು ಕಾಣುವಾಗ ಇದೊಂದು ಇಲಾಹೀ ಜಮಾಅತ್ ಆಗಿದೆ ಹಾಗೂ ಖಲೀಫರಿಗೆ ಅಲ್ಲಾಹನಿಂದ ನೇರವಾದ ಸಹಾಯ ಲಭಿಸುತ್ತದೆ ಎಂಬ ನನ್ನ ವಿಶ್ವಾಸ ಮತ್ತಷ್ಟು ದೃಢಗೊಂಡಿತು ಎಂದು ಹೇಳಿದರು.

ಆಲಮೀ ಬೈಅತ್ – ಇದರ ಪ್ರಭಾವ ಅನ್ಯರ ಮೇಲೆ ಸಹ ಉಂಟಾಗುತ್ತಿದೆ. ಕ್ರೋಶಿಯಾದಿಂದ ಆಗಮಿಸಿದ ಪಾರ್ಲಿಮೆಂಟ್ ಸದಸ್ಯರೊಬ್ಬರು ಆಲಮೀ ಬೈಅತ್ ಬಗ್ಗೆ ಈ ರೀತಿ ಹೇಳಿದರು: ಆಲಮೀ ಬೈಅತ್ ನನ್ನ ಮೇಲೆ ಬಹಳ ಪ್ರಭಾವ ಬೀರಿದೆ. ಕ್ರೈಸ್ತ ಧರ್ಮದ FAITHLY CONFORMATION (ನಂಬಿಕೆ ಊರ್ಜಿತಪಡಿಸುವ) ಸಮಾರಂಭಗಳಲ್ಲಿ ನಾನು ಅನೇಕ ಸಲ ಭಾಗವಹಿಸಿದ್ದೆ. ಆದರೆ ಅಹ್ಮದಿಯಾ ಜಮಾಅತಿನ ಆಲಮೀ ಬೈಅತ್ ಸಮಾರಂಭದಲ್ಲಿ ಪ್ರಕಟವಾಗುವ ಧಾರ್ಮಿಕ ನಿಷ್ಠೆ ಮತ್ತು ದೃಢ ನಿಶ್ಚಯವನ್ನು ನಾನು ಕಂಡದ್ದು ಅತ್ಯಂತ ವಿಸ್ಮಯಕರವೂ ಅದ್ಭುತಕರವೂ ಆಗಿರುವ ಅನುಭವವಾಗಿತ್ತು. ನಾನು ನನ್ನ ಜೀವನದಲ್ಲಿ ಎಂದಿಗೂ ಇದನ್ನು ಮರೆಯಲಾರೆ.

ಜಲ್ಸದ ಬಗ್ಗೆ ಮಾಧ್ಯಮಗಳು ಸಹ ಗಮನ ಹರಿಸಿದುವು. ಜಲ್ಸದ ಪರಿಸರವನ್ನು ವೀಕ್ಷಿಸಿದ ಮಾಧ್ಯಮಗಳು ಇಸ್ಲಾಮ್ ಬಗ್ಗೆ ಸರಿಯಾದ ಸಮಾಚಾರ ನೀಡಲು ನಿರ್ಬಂಧಿಸಲ್ಪಟ್ಟಿವೆ. ಬೋಲಿವೀಯಾ ದೇಶದ ನೇಶನಲ್ ನ್ಯೂಸ್ ಚ್ಯಾನೆಲ್‌ಗೆ ಸೇರಿದ ಒಬ್ಬ ಜರ್ನಲಿಸ್ಟ್ ತನ್ನ ಅಭಿಪ್ರಾಯವನ್ನು ಹೀಗೆ ಸೂಚಿಸಿದರು: ಪಶ್ಚಿಮದವರ ಅಭಿಪ್ರಾಯದಲ್ಲಿ ಇಸ್ಲಾಮ್ ಧರ್ಮ, ಮಹಿಳೆಯರನ್ನು ಹಿಂದಕ್ಕೆ ಸರಿಸುತ್ತದೆ ಮತ್ತು ಮಹಿಳೆಯರಿಗೆ ಯಾವ ಸ್ಥಾನವನ್ನೂ ಇಸ್ಲಾಮ್ ನೀಡುವುದಿಲ್ಲ. ಆದರೆ ನಾನು ಇಲ್ಲಿ ನೋಡಿರುವುದೇನೆಂದರೆ ಅಹ್ಮದಿಯಾ ಜಮಾಅತಿನ ಇಮಾಮರು, ಉನ್ನತ ಜಯ ಗಳಿಸಿದ ಮಹಿಳೆಯರಿಗೆ ಬಹುಮಾನ ನೀಡುತ್ತಿದ್ದಾರೆ. ಪ್ರತಿಯೊಬ್ಬ ಮಹಿಳೆಯ ಹೆಸರು ಹೇಳಿ ಒಬ್ಬೊಬ್ಬರನ್ನಾಗಿ ಬಹುಮಾನ ಪಡೆಯಲು ಕರೆಯುತ್ತಿದ್ದಾರೆ. ನಾನು ನನ್ನ ದೇಶಕ್ಕೆ ಮರಳಿ ಹೋದನಂತರ ನನ್ನ ಪತ್ರಿಕೆಯಲ್ಲಿ ಖಂಡಿತವಾಗಿ ಇದರ ಬಗ್ಗೆ ಬರೆಯುವೆನು. ಏನು, ಲೋಕದಲ್ಲಿ ಯಾವುದಾದರೊಬ್ಬ ನಾಯಕ ಮಹಿಳೆಯರನ್ನು ಮಾತ್ರ ಸಂಬೋಧಿಸಿ ಎಂದಾದರೂ ಭಾಷಣ ಮಾಡಿರುವರೇ? ಎಂದೂ ಇಲ್ಲ.

ಬೋಲಿವೀಯಾ ದೇಶದ ಇನ್ನೊಬ್ಬ ಜರ್ನಲಿಸ್ಟ್ ಕಾರ್ಲೋಸ್ ಜಿಮಿರಿಯಾಸ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತ್‌ಗೆ ಸಂಬಂಧಿಸಿ ನನ್ನ ಮೇಲೆ ಅತ್ಯಂತ ಪ್ರಭಾವ ಬೀರಿದುದು, ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಅಹ್ಮದಿಯಾ ಜಮಾಅತ್ ಹೊಂದಿರುವ ಉತ್ಸಾಹ ಮತ್ತು ಅದು ಮಾಡುತ್ತಿರುವ ಪ್ರಯತ್ನವಾಗಿದೆ. ಇಂದಿನ ಕಾಲಘಟ್ಟದಲ್ಲಿ ಇದು ಬಹಳ ಹೆಚ್ಚು ಮುಖ್ಯವೂ ಆವಶ್ಯಕವೂ ಆಗಿರುವ ಸಂದೇಶವಾಗಿದೆ.

ಒಟ್ಟಿನಲ್ಲಿ ಜಲ್ಸದ ಪರಿಸರ ಮತ್ತು ಜಲ್ಸದಲ್ಲಿ ಕಾರ್ಯನಿರತರಾದವರು ಪ್ರತಿಯೊಬ್ಬ ನ್ಯಾಯನಿಷ್ಠನ ಮೇಲೆ ಪ್ರಭಾವ ಬೀರುತ್ತಾರೆ. ಜಲ್ಸದ ಎಲ್ಲಾ ಕಾರ್ಯಕರ್ತರಿಗೆ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ. ಜಲ್ಸದಲ್ಲಿ ಭಾಗವಹಿಸಿದ ಎಲ್ಲರಿಗೂ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ. ಅವರು ಮೌನವಾಗಿ ಮಾಡುವ ಈ ತಬ್ಲೀಗ್‌ನಲ್ಲಿ ಭಾಗವಹಿಸಿದವರಾಗಿದ್ದಾರೆ.

ಮಾಧ್ಯಮಗಳು ಜಲ್ಸದ ಬಗ್ಗೆ ವಿಶಾಲವಾಗಿ ವರದಿ ಮಾಡಿದುವು. ಮಾಧ್ಯಮಗಳ ಮೂಲಕ 358 ವರದಿಗಳು ಪ್ರಕಟವಾಗಿವೆ. ಈಗ ಈ ಸಂಖ್ಯೆ ವರ್ಧಿಸುತ್ತಿದೆ. ಒಂದು ಮಿತವಾದ ಅಂದಾಜು ಪ್ರಕಾರ ಎಲ್ಲ ಮಾಧ್ಯಮಗಳ ಮೂಲಕ 128 ಮಿಲಿಯಕ್ಕಿಂತ ಹೆಚ್ಚು ಸಂಖ್ಯೆಯ ಜನರಿಗೆ ಅಹ್ಮದಿಯತ್ತಿನ ಸಂದೇಶ ತಲಪಿಸಲಾಗಿದೆ. ಆಫ್ರಿಕ ಖಂಡದಲ್ಲೂ ಜಲ್ಸದ ಬಗ್ಗೆ ವರದಿಗಳು ಪ್ರಕಟವಾಗಿವೆ. ಆಫ್ರಿಕದಲ್ಲಿ ಎಂ.ಟಿ.ಎ. ಆಫ್ರಿಕ ಮಾತ್ರವಲ್ಲ ಇತರ ಹತ್ತು ಚ್ಯಾನಲ್‌ಗಳು ಸಹ ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ಬಿತ್ತರಿಸಿದುವು. ವಿವಿಧ ದೇಶಗಳಲ್ಲಿ 150 ಗಂಟೆಗಳಷ್ಟು ಕಾಲಾವಧಿಯ ವರದಿಗಳು ಪ್ರಸಾರಗೊಂಡವು. ನಾವು ಯಾವಾಗಲೂ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರನ್ನಾಗಿ ಅಲ್ಲಾಹನು ಮಾಡಲಿ. ನಾವು ಯಾವಾಗಲೂ ಅಲ್ಲಾಹನ ಅನುಗ್ರಹಗಳನ್ನು ಗಳಿಸುವವರೂ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರೂ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರೂ ಆಗಿ ಅಲ್ಲಾಹನು ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಮೂವರು ಮೃತರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವ ಬಗ್ಗೆ ಹುಝೂರ್ ಹೇಳಿದರು:)

1. ಮುಕರ್‍ರಮ ಸಾಹಿಬ್‌ಝಾದಿ ಝುಕಿಯ್ಯ ಬೇಗಮ್ ಸಾಹಿಬ. ಕರ್ನಲ್ ಮಿರ್ಝಾ ದಾವೂದ್ ಅಹ್ಮದ್ ಸಾಹಿಬರ ಪತ್ನಿ. ಅವರು ಹಝ್‌ರತ್ ನವಾಬ್ ಅಮತುಲ್ ಹಫೀಝ್ ಬೇಗಮ್ ಸಾಹಿಬ ಮತ್ತು ನವಾಬ್ ಅಬ್ದುಲ್ಲಾ ಖಾನ್ ಸಾಹಿಬರ ಪುತ್ರಿಯಾಗಿದ್ದರು.

2. ಮುಕರ್‍ರಮ್ ತಾರಿಖ್ ಮಸ್‌ಊದ್ ಸಾಹಿಬ್ ಮುರಬ್ಬಿ. ರಬ್ವದ ನಿಝಾರತ್ ಇಸ್ಲಾಹ್‌ವ ಇರ್ಶಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರು ಮುಕರ್‍ರಮ್ ಮಸ್‌ಊದ್ ಅಹ್ಮದ್ ತಾಹಿರ್ ಸಾಹಿಬರ ಪುತ್ರ.

3. ಮುಕರ್‍ರಮ್ ಶಕೀಲ್ ಅಹ್ಮದ್ ಮುನೀರ್ ಸಾಹಿಬ್. ಆಸ್ಟ್ರೇಲಿಯಾದ ಮಾಜಿ ಮುಬಲ್ಲಿಗ್ ಇನ್‌ಚಾರ್ಜ್. ಖಲೀಲ ಅಹ್ಮದ್ ಸಾಹಿಬ್ ಮೋಂಘೇರೀರವರ ಪುತ್ರ.

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London. on 04-08-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon